# ದೇವಾಲಯ: ಅಂದು-ಇಂದು

ಅದೊಂದು ಪ್ರಸಿದ್ಧ ದೇವಾಲಯ. ಅದರ ವಿಸ್ತಾರವಾದ ಸಭಾಂಗಣದಲ್ಲಿ ಮಹಾತ್ಮರೆನ್ನಿಸಿಕೊಂಡ ಸಂತರೊಬ್ಬರು ಕುಳಿತುಕೊಂಡು ಪ್ರವಚನ ಮಾಡುತ್ತಿದ್ದರು. ಸಭಿಕರು ಅವರ ಮಾತುಗಳನ್ನು ತನ್ಮಯತೆಯಿಂದ ಆಲಿಸುತ್ತಿದ್ದರು. ಅಷ್ಟರಲ್ಲಿಯೇ ಒಬ್ಬ ಶ್ರೀಮಂತರು ದೇವಾಲಯಕ್ಕೆ ಬಂದರು. ಅದನ್ನು ಗಮನಿಸಿದ ಅರ್ಚಕರು ಗರ್ಭಗುಡಿಯಲ್ಲಿನ ತಮ್ಮ ಕೆಲಸವನ್ನು ನಿಲ್ಲಿಸಿ ಹೊರ ಬಂದು, ಶ್ರೀಮಂತರೊಂದಿಗೆ ಮಾತಿಗೆ ತೊಡಗಿದರು. ಅರ್ಚಕರು ಗರ್ಭಗುಡಿಯಿಂದ ಹೊರಬಂದೊಡನೇ, ಪ್ರವಚನ ಮಾಡುತ್ತಿದ್ದ ಸಂತರು ಧಿಗ್ಗನೆ ಎದ್ದುನಿಂತು ತಲೆಬಾಗಿ ನಮಸ್ಕರಿಸಿದರು. ಅರ್ಚಕರು ಶ್ರೀಮಂತರೊಡನೆ ತಮ್ಮ 'ವ್ಯವಹಾರ'ವನ್ನು ಮುಗಿಸಿ, ಗರ್ಭಗುಡಿಯೊಳಕ್ಕೆ ಹೋದಾಗಲೂ ಸಂತರು ಮತ್ತೊಮ್ಮೆ ನಮಸ್ಕರಿಸಿದರು. ಇದು ನಾಲ್ಕೈದು ಬಾರಿ ಪುನರಾವರ್ತಿತವಾಯಿತು. ಸಭಿಕರಿಗೆ ಸಂತರ ಈ ವರ್ತನೆಯಿಂದ ಆಶ್ಚರ್ಯ! ಅವರಲ್ಲೊಬ್ಬರು ಧೈರ್ಯವಹಿಸಿ ಕೇಳಿಯೇಬಿಟ್ಟರು: 'ಸ್ವಾಮಿ, ತಾವು ಜ್ಞಾನಿಗಳು, ಮಹಾತ್ಮರು; ಅರ್ಚಕರಿಗಿಂತಾ ವಯಸ್ಸಿನಲ್ಲೂ ಹಿರಿಯರು, ತಾವು ಅವರಿಗೆ ಅಷ್ಟೊಂದು ಬಾರಿ ನಮಸ್ಕರಿಸುವ ಅಗತ್ಯವಿತ್ತೆ?' ಅದಕ್ಕೆ ಸಂತರು ಉತ್ತರಿಸಿದ್ದು ಹೀಗೆ: 'ಛೇ, ನಾನು ಅರ್ಚಕರಿಗೆ ನಮಸ್ಕರಿಸುತ್ತಿದ್ದೆ ಎಂದು ತಿಳಿದಿರಾ? ಅದು ಹಾಗಲ್ಲ; ನಾನು ನಮಸ್ಕರಿಸುತ್ತಿದ್ದುದು ಭಗವಂತನಿಗೆ, ಅರ್ಚಕರು ಗರ್ಭಗುಡಿಯಿಂದ ಹೊರಕ್ಕೆ ಬಂದಾಗ ಭಗವಂತ ಒಳಕ್ಕೆ ಹೋಗುತ್ತಿದ್ದುದನ್ನೂ ಅರ್ಚಕರು ಗರ್ಭಗುಡಿಯ ಒಳಕ್ಕೆ ಹೋದಾಗ, ದೇವರು ಹೊರಬರುತ್ತಿದ್ದುದನ್ನೂ ನಾನು ಕಾಣುತ್ತಿದ್ದೆ. ನನ್ನೆದುರೇ ಹಾದು ಹೋಗುತ್ತಿದ್ದ ಭಗವಂತನಿಗೆ ನಮಸ್ಕರಿಸದೇ ಇರಲು ಸಾಧ್ಯವೇ?'

ಮೇಲ್ನೋಟಕ್ಕೆ ಇದೊಂದು ವ್ಯಂಗ್ಯ ಮಿಶ್ರಿತ ನಗೆಹನಿ ಎನ್ನಿಸಿದರೂ, ಇದರಲ್ಲೊಂದು ಸತ್ಯದ ಕಿಡಿ ಹುದುಗಿದೆ. ಇಂದಿನ ಬಹುತೇಕ ದೇವಾಲಯಗಳು ಶ್ರದ್ಧಾ ಕೇಂದ್ರಗಳಾಗಿ ಉಳಿಯದೇ, ವ್ಯವಹಾರ ಕೇಂದ್ರಗಳಂತಾಗಿವೆ ಎಂಬುದೇ ಆ ಕಟು ಸತ್ಯ. ಈ ದಿನ ಬಹಳಷ್ಟು ದೇವಾಲಯಗಳಲ್ಲಿ ಭಕ್ತಿಯನ್ನು ಹಣದ ರೂಪದಲ್ಲಿ ಅಳೆಯಲಾಗುತ್ತಿದೆ; ದಕ್ಷಿಣೆ, ಕಾಣಿಕೆ, ಹರಕೆಗಳ ಮೂಲಕ ದೈವಕೃಪೆಯನ್ನು 'ಖರೀದಿಸುವ' ಕ್ರಿಯೆಗೇ ಹೆಚ್ಚು ಪ್ರಾಶಸ್ತ್ಯ ಕೊಡಲಾಗುತ್ತಿದೆ. ಹಿಂದಿನ ಕಾಲದಲ್ಲಿ ದೇವಾಲಯಗಳು ಸಮಷ್ಟಿಯ ಪಾಲಿಗೆ ನೆಮ್ಮದಿ ನೀಡುವ ತಾಣಗಳಾಗಿದ್ದುವು. ಅಲ್ಲಿ ಕೊಡುಕೊಳ್ಳುವ ವ್ಯವಹಾರದ ಬದಲು, ಯಾವುದೋ ಒಂದು ಮಹಾ ಸತ್ತ್ವದ ಎದುರು, ನಮ್ಮ ಒಳಗನ್ನು ತೆರೆದಿಡುವ ಪ್ರಕ್ರಿಯೆಗೇ ಹೆಚ್ಚು ಮಹತ್ವವಿರುತ್ತಿತ್ತು. ಅಂಥ ಪವಿತ್ರ ವಾತಾವರಣ ತುಂಬಿ ತುಳುಕುತ್ತಿದ್ದ ದೇವಾಲಯಗಳಲ್ಲಿ, ಭಕ್ತರ ವ್ಯಕ್ತಿತ್ವದಲ್ಲಿನ ತಾಮಸ ಪ್ರವೃತ್ತಿ ಕರಗಿ, ಸಾತ್ವಿಕ ಭಾವ ಪುಟಿಯುವಂತಾಗುತ್ತಿತ್ತು. ಆರ್ತರೂ, ದುಃಖಿಗಳೂ ದೇವಾಲಯಕ್ಕೆ ಬಂದು ಮನಶ್ಶಾಂತಿಯನ್ನು ಪಡೆಯುತ್ತಿದ್ದರು. ಜಿಜ್ಞಾಸುಗಳು ಅಲ್ಲಿಗೆ ಬಂದು, ತಮ್ಮ ಸಂದೇಹಗಳಿಗೆ ಸಮಾಧಾನವನ್ನು ಅರಸುತ್ತಿದ್ದರು. ಆದ್ದರಿಂದಲೇ ಪು.ತಿ.ನ.ರವರು ದೇಗುಲವನ್ನು 'ಸಕಲ ಸಂದೇಹಗಳು ಬಳಲಿ ಬಳಿಗೈತಂದು ಬಿಡುವ ಬಯಸುವ ತವರು' ಎಂದಿರುವುದು.

ದೇವಾಲಯಗಳು ಪೂಜೆ ಪುರಸ್ಕಾರಗಳಿಗಷ್ಟೇ ಸೀಮಿತಗೊಳ್ಳದೇ, ಸಮಷ್ಟಿಯ ಆತ್ಮ ಶಿಕ್ಷಣ ಕೇಂದ್ರಗಳಾಗಿಯೂ ಕೆಲಸ ಮಾಡಬೇಕೆಂಬ ಹಿರಿಯ ಉದ್ದೇಶ ನಮ್ಮ ಪ್ರಾಚೀನರಲ್ಲಿತ್ತು. ಆದ್ದರಿಂದಲೇ ಅವುಗಳಲ್ಲಿ ಶಿಲ್ಪ, ಚಿತ್ರ ಇತ್ಯಾದಿ ಕಲೆಗಳಿಗೆ ಸಾಕಷ್ಟು ಅವಕಾಶ ಕೊಡಲಾಗುತ್ತಿತ್ತು. ದೇವಾಲಯಗಳ ಸಭಾಂಗಣಗಳಲ್ಲಿ ನಾಟ್ಯ, ಸಂಗೀತ, ಯಕ್ಷಗಾನ, ಗಮಕ, ಕಥಾ ಕಾಲಕ್ಷೇಪ-ಮುಂತಾದ ಕಲೆಗಳ ಪ್ರದರ್ಶನಕ್ಕೆ ಪ್ರೋತ್ಸಾಹ ಕೊಡಲಾಗುತ್ತಿತ್ತು. ದೇವಾಲಯಗಳಲ್ಲಿ ಊರಿನ ಸಮಸ್ಯೆಗಳು ಚರ್ಚಿತವಾಗಿ, ಸೂಕ್ತ ಪರಿಹಾರಗಳು ದೊರೆಯುತ್ತಿದ್ದವು; ನ್ಯಾಯ ತೀರ್ಮಾನದ ಪ್ರಕ್ರಿಯೆಯೂ ಅಲ್ಲಿಯೇ ನಡೆದು, ದೈವ ಸನ್ನಿಧಿಯಲ್ಲಿ ಅಪರಾಧಿಗಳಿಗೆ ಶಿಕ್ಷೆ, ಅನ್ಯಾಯಕ್ಕೊಳಗಾದವರಿಗೆ ನ್ಯಾಯ ಒದಗುತ್ತಿದ್ದ ಸಂದರ್ಭಗಳೂ ಇದ್ದವು. ದೇವಾಲಯಗಳ ಪ್ರಶಾಂತ ವಾತಾವರಣದಲ್ಲಿ ಕವಿಗಳು ಕಾವ್ಯಗಳನ್ನೂ, ವಿದ್ವಾಂಸರು ಗ್ರಂಥಗಳನ್ನೂ ರಚಿಸುತ್ತಿದ್ದರು. ಕುಮಾರವ್ಯಾಸ, ಲಕ್ಷ್ಮೀಶರು ತಮ್ಮ ಕಾವ್ಯಗಳನ್ನು ದೇವಾಲಯಗಳಲ್ಲಿ ಕುಳಿತೇ ರಚಿಸಿದರು ಎಂಬ ಸಂಗತಿ ಎಲ್ಲರಿಗೂ ತಿಳಿದಿರುವಂಥದು.

ಹಿಂದಿನ ಕಾಲದ ದೇವಾಲಯಗಳು ಜನವಿದೂರವಾದ ಸ್ಥಳದಲ್ಲಿರುತ್ತಿದ್ದುದರಿಂದ ಅಲ್ಲಿ ಲೌಕಿಕ ಜಗತ್ತಿನ ಸೆಳೆತಗಳಿಗೆ ಹೆಚ್ಚು ಅವಕಾಶವಿರಲಿಲ್ಲ. ಈಗಂತೂ ಎಲ್ಲೆಂದರಲ್ಲಿ ದೇವಾಲಯಗಳು ದಿಢೀರೆಂದು ಹುಟ್ಟಿಕೊಳ್ಳುತ್ತಿವೆ. ಜೊತೆಗೆ, ಪುಟ್ಟ ಪುಟ್ಟ ದೇವಾಲಯಗಳೂ ಹಲವು ಹತ್ತು ವಿಗ್ರಹಗಳನ್ನು ಒಳಗೊಂಡು ದೇವಾಲಯ ಸಂಕೀರ್ಣಗಳಾಗಿವೆ. ಇಂಥ 'ಹೋಲ್ಸಾಲ್ ಸಂಸ್ಕೃತಿ'ಯಿಂದಾಗಿ, ಭಗವತ್ ಸಾನ್ನಿಧ್ಯದ ಅನುಭವ ಭಕ್ತರ ಪಾಲಿಗೆ ದುರ್ಲಭವಾಗಿದೆ. 'ಗರ್ಭಗುಡಿಯ ಸೆರೆಯಿಂದ ದೇವರು ಓಡಿಹೋಗಿದ್ದಾನೆ' -ಎನ್ನುವಂತಾಗಿದೆ!

**-ವೈನತೇಯ**

## ಮಾತೇ ಮುತ್ತು

★ ಕಳ್ಳನೋ, ಸುಳ್ಳನೋ, ಮೋಸಗಾರನೋ -ಯಾರೇ ಇರಲಿ, ಅವನಲ್ಲೂ ಮಾನವೀಯತೆಯ ಬೀಜಗಳು ಅಡಗಿರುತ್ತವೆ. ಸೂಕ್ತ ಗೊಬ್ಬರ, ಗಾಳಿ, ನೀರು, ಪರಿಸರ ದೊರೆತರೆ ಮಾನವೀಯತೆಯ ನವುರಾದ ತಳಿರು ಚಿಗುರೊಡೆಯಲು ಸಾಧ್ಯ.

-ವೀರೇಂದ್ರ ಹೆಗ್ಗಡೆ

★ ಕೆಲವರು ಅದೃಷ್ಟದಿಂದ ಒಳ್ಳೆಯ ಕೆಟ್ಟ ಫಲಗಳು ಉಂಟಾಗುತ್ತವೆ ಎನ್ನುತ್ತಾರೆ. ಸ್ವಭಾವತಃ ಎಲ್ಲವೂ ಆಗುವವು ಎನ್ನುತ್ತಾರೆ. ಕಾಲವೇ ಕಾರಣವೆನ್ನುವವರು ಹಲವರು. ಪುರುಷ ಪ್ರಯತ್ನವೇ ಮುಖ್ಯ ಎಂದೂ ಹೇಳುವವರಿದ್ದಾರೆ. ಆದರೆ ನಿಪುಣರು ಇವೆಲ್ಲವೂ ಸೇರಿ ಫಲವನ್ನು ಕೊಡುತ್ತವೆ ಎಂದು ಹೇಳುತ್ತಾರೆ.

-ಯಾಜ್ಞವಲ್ಕ್ಯ

★ ಕೆಲಸವನ್ನು ಆರಂಭಿಸುವಾಗ ಅದರ ಫಲಾಫಲವನ್ನು ಯಾರು ಯೋಚಿಸುವುದಿಲ್ಲವೋ ಅವನು ಮೂಢ.

-ರಾಮಾಯಣ

★ 'ಸರಿ' 'ತಪ್ಪು'ಗಳ ಯೋಚನೆ ಬಿಡದವರು ಪ್ರೇಮಿಗಳೇ ಅಲ್ಲ!

-ಥಾಮಸ್ ಹಾರ್ಡಿ

★ ನಿಜವಾದ ಪ್ರೇಮದ ದಾರಿ ಎಂದೂ ಸುಗಮವಾಗಿರಲಿಲ್ಲ.

-ಶೇಕ್ಸ್ ಪಿಯರ್

★ ಅನೇಕ ದುಃಖಗಳಿಂದ ತುಂಬಿದ, ಔಷಧಿ ಇಲ್ಲದ ರೋಗ- ಪ್ರೇಮ.

-ಸ್ಯಾಮುಯಲ್ ಡೇನಿಯಲ್

★ ಕೈಗೆ ಸಿಕ್ಕಷ್ಟು ಕೆಲಸ ಮಾಡು, ಕಾಲಿಗೆ ಸಿಕ್ಕಷ್ಟು ನಡೆ, ತಲೆಗೆ ಸಿಕ್ಕಷ್ಟು ವಿಚಾರಮಾಡು, ಹೃದಯಕ್ಕೆ ಸಿಕ್ಕಷ್ಟು ಪ್ರೇಮಿಸು -ಸುಮ್ಮನೆ ಸಹಜ ಜೀವನ ಇರಲಿ. ಒಳಗ ಒಂದಷ್ಟು ಬೆಳಕು ಐತಿ ಅಂತ ಗೊತ್ತಿರಲಿ, ಬದುಕು ಬಾಳ ಸುಂದರ ಆಗತೈತಿ.

ಸಿದ್ದೇಶ್ವರ ಸ್ವಾಮಿಗಳು

★ ತಲೆ ಇಲ್ಲದಿದ್ದರೆ, ತಲೆಗೆ ಏಟು ಬೀಳುತ್ತದೆ! ಇದು ನಿಜ.

-ಪಂಜೆ ಮಂಗೇಶರಾವ್

★ ಕಷ್ಟದಲ್ಲಿರುವವನ ಬುದ್ಧಿವಾದವನ್ನು ಎಂದೂ ನಂಬಬೇಡ!

-ಈಸೋಪ್

★ ಯುವತಿ ಎಂದು ಪ್ರೀತಿಸಬೇಡ! ಮುದುಕಿ ಎಂದು ದ್ವೇಷಿಸಬೇಡ!

-ರಷ್ಯಾ ಗಾದೆ

★ ನಿಮಗೆ ಸಾಧ್ಯವಾದರೆ ಇತರರಿಗಿಂತ ಬುದ್ಧಿವಂತರಾಗಿರಿ; ಆದರೆ ಇತರರಿಗೆ ಹಾಗೆಂದು ಹೇಳಬೇಡಿರಿ!

-ಲಾರ್ಡ್ ಚೆಸ್ಟರ್ ಫೀಲ್ಡ್

★ ಒಂದು ಕ್ಷಣದ ಸಿಟ್ಟಿನಿಂದ ನೀವು ಪಾರಾದರೆ, ನಾಲ್ಕು ದಿನದ ದುಃಖದಿಂದ ಪಾರಾದಿರಿ ಎನ್ನಬಹುದು.

-ಸ್ವಾಮಿ ವಿವೇಕಾನಂದ